# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 281 |
| ಸದಸ್ಯರ ಹೆಸರು | : | ಶ್ರೀ ಸುನಿಲ್ ವಲ್ಯಾಪುರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 06-12-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಒಟ್ಟು ಉದ್ದ ಎಷ್ಟು ಕಿ.ಮೀ. ಇದೆ; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಉದ್ದ ಕಿ.ಮೀ. 7797.50 ಇರುತ್ತದೆ.<br><br>ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಉದ್ದದ ವಿವರ ಈ ಕೆಳಕಂಡಂತಿದೆ:<br><br>
<table>
<tr><th>ಕ್ರ. ಸಂ.</th><th>ವಲಯದ ಹೆಸರು</th><th>ರಾಜ್ಯ ಹೆದ್ದಾರಿ (ಕಿಮೀ ಗಳಲ್ಲಿ)</th><th>ಜಿಲ್ಲಾ ಮುಖ್ಯ ರಸ್ತೆಗಳು (ಕಿಮೀ ಗಳಲ್ಲಿ)</th></tr>
<tr><td>1</td><td>ದಕ್ಷಿಣ ವಲಯ</td><td>7692.60</td><td>20355.67</td></tr>
<tr><td>2</td><td>ಉತ್ತರ ವಲಯ</td><td>8211.35</td><td>15874.28</td></tr>
<tr><td>3</td><td>ಈಶಾನ್ಯ ವಲಯ</td><td>6600.34</td><td>9269.73</td></tr>
<tr><td>4</td><td>ಕೇಂದ್ರ ವಲಯ</td><td>5266.61</td><td>9651.80</td></tr>
<tr><td></td><td>ಒಟ್ಟು:</td><td>27770.90</td><td>55151.48</td></tr>
</table>
ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>2023-24ನೇ ಸಾಲಿನ ಮುಂಗಡ ಪತ್ರದಲ್ಲಿ ರಸ್ತೆಗಳ ದುರಸ್ಥಿಗಾಗಿ ಮೀಸಲಿರಿಸಲಾದ ಹಣ ಎಷ್ಟು, ಇಲ್ಲಿಯವರೆಗೆ ಎಷ್ಟು ಕಿಲೋ ಮೀಟರ್ ರಸ್ತೆಯನ್ನು ದುರಸ್ಥಿಗೊಳಿಸಲಾಗಿದೆ; ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿರುವ ಹಣ ಎಷ್ಟು; (ವಿಧಾನ ಸಭೆ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ರಾಷ್ಟ್ರೀಯ ಹೆದ್ದಾರಿ ಲೋಕೋಪಯೋಗಿ ಇಲಾಖೆ ಯಿಂದ ಕೈಗೊಳ್ಳುವ ಕಾಮಗಾರಿಗಳಿಗೆ 2023-24ನೇ ಸಾಲಿನ ಆಯವ್ಯಯದಲ್ಲಿ ರಸ್ತೆಗಳ ದುರಸ್ತಿಗಾಗಿ ಯಾವುದೇ ಮುಂಗಡ ಪತ್ರ ಹಣ ಬಿಡುಗಡೆಯಾಗಿರುವುದಿಲ್ಲ.<br>ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ 2023-24ನೇ ಸಾಲಿನ ಆಯವ್ಯಯದಲ್ಲಿ ರಸ್ತೆಗಳ ದುರಸ್ತಿಗಾಗಿ ಮೀಸಲಿರಿಸಲಾದ ಹಣ, ದುರಸ್ಥಿಪಡಿಸಿರುವ ರಸ್ತೆಯ ಉದ್ದ, ಬಿಡುಗಡೆ ಮಾಡಿರುವ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.</td></tr>
<tr><td>ಇ)</td><td>ಬೀದರ್ ಶ್ರೀರಂಗಪಟ್ಟಣ ಹೆದ್ದಾರಿಯ ಸಂಚಾರ ದಟ್ಟಣೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಜೇವರ್ಗಿಯಿಂದ ಲಿಂಗಸೂರುವರೆಗಿನ ಹೆದ್ದಾರಿ ರಸ್ತೆಯು ತುಂಬಾ ಕಿರಿದಾಗಿದ್ದು, ಅದರಲ್ಲೂ ಗುಂಡಿ ಬಿದ್ದಿರುವ ಕಾರಣ ಸಂಚಾರ ತುಂಬಾ ಕಷ್ಟಸಾಧ್ಯವಾಗಿದ್ದು ಈ ರಸ್ತೆಯು ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಂದ</td><td>ಬೀದರ್ ಶ್ರೀರಂಗಪಟ್ಟಣ ಹೆದ್ದಾರಿಯ ಸಂಚಾರ ದಟ್ಟಣೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಜೇವರ್ಗಿ-ಲಿಂಗಸುಗೂರು ಭಾಗವು ಒಟ್ಟು 113.00 ಕಿ.ಮೀ. ಇರುತ್ತದೆ. ಈ ಭಾಗದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಮಾಹಿತಿ ಕೆಳಕಂಡಂತಿದೆ:<br><br>1) ರಾಷ್ಟ್ರೀಯ ಹೆದ್ದಾರಿ-150ಎ ಜೇವರ್ಗಿಯಿಂದ ಶಹಾಪೂರ್ (ಹತ್ತಿಗೂಡೂರು) ವರೆಗಿನ ರಸ್ತೆಯು 50.00 ಕಿ.ಮೀ.</td></tr>
</table>

| | | |
|---|---|---|
| | ಬೆಂಗಳೂರಿಗೆ ಸಂಪರ್ಕ ಸಾಧಿಸುವ ಅತೀ ಮುಖ್ಯ ರಸ್ತೆಯಾಗಿದ್ದು, ಪ್ರತಿನಿತ್ಯ ಪ್ರತಿ ಗಂಟೆಗೆ ಸಾವಿರಾರು ವಾಹನಗಳು ಈ ರಸ್ತೆಯ ಮೇಲೆ ಸಂಚರಿಸುತ್ತಿರುವುದರಿಂದ ಈ ಹೆದ್ದಾರಿಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸುವುದೇ? | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುತ್ತದೆ, ಸದರಿ ಭಾಗದ ರಸ್ತೆಗೆ ನಾಲ್ಕು ಪಥದ ರಸ್ತೆಯನ್ನು ಮಾಡಲು ವಿಸ್ತೃತ ಯೋಜನಾ ವರದಿ (DPR) ತಯಾರಿಸುವ ಹಂತದಲ್ಲಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ವರದಿಸಿರುತ್ತಾರೆ.<br><br>2) ಇದಲ್ಲದೆ ರಾಷ್ಟ್ರೀಯ ಹೆದ್ದಾರಿ–150ಎ ಜೇವರ್ಗಿಯಿಂದ ಶಹಾಪೂರ್ (ಹತ್ತಿಗೂಡೂರು) ಭಾಗದ ನಿರ್ವಹಣೆಗೆ ಸಂಬಂಧಸಿದಂತೆ ದುರಸ್ಥಿ ಮತ್ತು ನಿರ್ವಹಣೆ ಲೆಕ್ಕ ಶೀರ್ಷಿಕೆಯಡಿಯಲ್ಲಿ 30.00 ಕಿ.ಮೀ. ಉದ್ದಳತೆಗೆ ಆಯ್ದ ಭಾಗಗಳಲ್ಲಿ (ಹಾನಿಗೊಳಗಾದ ಭಾಗಗಳಿಗೆ) ರೂ.11.40 ಕೋಟಿ ಬಿಡುಗಡೆಯಾಗಿದ್ದು, ಪ್ರಸ್ತುತ ಈ ಭಾಗವು ನಿರ್ವಹಣೆ (DLP) ಅವಧಿಯಲ್ಲಿರುತ್ತದೆಂದು ಹಾಗೂ ಬಾಕಿ ಉಳಿದ 20.00 ಕಿ.ಮೀ. (ಆಯ್ದ ಭಾಗಗಳಲ್ಲಿ) ನಿರ್ವಹಣೆ ಯಡಿಯಲ್ಲಿ ರೂ. 8.80 ಕೋಟಿ ಮೊತ್ತಕ್ಕೆ ನಿರ್ವಹಣಾ ಕಾಮಗಾರಿ ಕೈಗೊಳ್ಳಲು ಪ್ರಸ್ತಾವನೆಯನ್ನು ಸಕ್ಷಮ ಪ್ರಾಧಿಕಾರ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವರಿಗೆ ಅನುಮೋದನೆ ಹಾಗೂ ಟೆಂಡರ್ ಆಹ್ವಾನಿಸಲು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ ಎಂದು ವರದಿಸಿರುತ್ತಾರೆ.<br><br>3) ರಾಷ್ಟ್ರೀಯ ಹೆದ್ದಾರಿ ವಲಯ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ–150ಎ ಶಹಾಪುರ (ಹತ್ತಿಗೂಡೂರು) ರಿಂದ ಕಿ.ಮೀ. 50.00 ರಿಂದ ಕಿ.ಮೀ. 113.00 ಲಿಂಗಸುಗೂರು ಒಟ್ಟು 63.00 ಕಿ.ಮೀ. ಬರುತ್ತದೆ.<br><br>4) ಕಿ.ಮೀ.50.00 ರಿಂದ ಕಿ.ಮೀ.89.300 ತಿಂತಣಿ ಸೇತುವೆ ಶಹಾಪುರ (ಹತ್ತಿಗೂಡೂರು) ವರೆವಿಗೂ Intermediate Lane ಆಗಿದ್ದು, ನಿಯತಕಾಲಿಕ ನಿರ್ವಹಣೆ ಯೋಜನೆ ಅಡಿಯಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ. ಇದರ ನಿರ್ವಹಣಾ ಅವಧಿ (DLP) ದಿನಾಂಕ:30.04.2025 ವರೆವಿಗೂ ಇರುತ್ತದೆ.<br><br>5) ಕಿ.ಮೀ. 89.30 (ತಿಂತಣಿ ಸೇತುವೆ) ರಿಂದ ಕಿ.ಮೀ.113.00 (ಲಿಂಗಸುಗೂರು) ವರೆವಿಗೂ Intermediate Lane ಆಗಿದ್ದು, ನಿಯತಕಾಲಿಕ ನಿರ್ವಹಣೆ ಅಡಿಯಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ.<br><br>ರಾಷ್ಟ್ರೀಯ ಹೆದ್ದಾರಿ–150ಎ ರ ಕಿ.ಮೀ.50.00 ಶಹಾಪುರ (ಹತ್ತಿಗೂಡೂರು) ದಿಂದ ಕಿ.ಮೀ.113.00 (ಲಿಂಗಸುಗೂರು) ರವರೆಗೆ ಸಂಚಾರಕ್ಕೆ ಯೋಗ್ಯವಾಗಿರಿಸಲಾಗಿದೆ. |

ಕಡತ ಸಂಖ್ಯೆ: ಲೋಇ 76 ಸಿಐಎಸ್ 2023 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

/ ಸತೀಶ ಜಾರಕಿಹೊಳಿ
ಲೋಕೋಪಯೋಗಿ ಸಚಿವರು